ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 11–12–2019

**ಪತ್ರಿಕಾ ಆಮಂತ್ರಣ**

**ವಿಶೇಷ ಮಾಧ್ಯಮ ಆಮಂತ್ರಣ**

ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಶಾಸಕ ಶ್ರೀ ಅರಗ ಜ್ಞಾನೇಂದ್ರ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 12 ರಂದು ಬೆಳಿಗ್ಗೆ 10–00 ಗಂಟೆಗೆ ಶಾಸಕರ ಭವನದ ನೂತನ ಕಟ್ಟಡ 5 ರಲ್ಲಿನ ಮೊದಲನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಸಭೆ ಸೇರಿ, ನಂತರ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ದೊಡ್ಡ ಬಿದರಕಲ್ಲು, ಹುಳಿಮಾವು ಹಾಗೂ ಎಲೆ ಮಲ್ಲಪ್ಪ ಶೆಟ್ಟಿ ಕೆರೆಗಳ ಪ್ರದೇಶಕ್ಕೆ ತೆರಳಿ ಪರಿವೀಕ್ಷಣೆ ನಡೆಸಲಿದೆ.

ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವ್ಯಾಪಕ ಪ್ರಚಾರ ದೊರಕಿಸಿಕೊಡಲು ಕೋರಲಾಗಿದೆ.

ಡಿ. ಪಿ. ಮುರಳೀಧರ್
ಉಪ ನಿರ್ದೇಶಕರು ( ವಾರ್ತೆ )

**ವಿಶೇಷ ಮಾಧ್ಯಮ ಆಮಂತ್ರಣ**

ಮುಖ್ಯಮಂತ್ರಿ ಶ್ರೀ ಬಿ ಎಸ್. ಯಡಿಯೂರಪ್ಪ ಅವರು ಡಿಸೆಂಬರ್ 12 ರಂದು ಬೆಳಿಗ್ಗೆ 8–30 ಗಂಟೆಗೆ ನಗರದ ಹೆಬ್ಬಾಳದ ಪಶುವೈದಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಪಶುಪಾಲನಾ ಭವನ ಪಶುವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ನೂತನ ಕಟ್ಟಡಗಳನ್ನು ಉದ್ಘಾಟಿಸಲಿದ್ದಾರೆ.

ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ಶಾಸಕ ಶ್ರೀ ಬೈರತಿ ಸುರೇಶ್ ಅವರು ಅಧ್ಯಕ್ಷತೆವಹಿಸಲಿರುವ ಈ ಸಮಾರಂಭದಲ್ಲಿ ಪಶುಸಂಗೋಪನಾ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಹಜ್ ಮತ್ತು ವಕ್ಫ್ ಸಚಿವ ಶ್ರೀ ಪ್ರಭು ಬಿ ಚವ್ಹಾಣ್ ಅವರೂ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಸಮಾರಂಭದ ಅಂತ್ಯದಲ್ಲಿ ಮುಖ್ಯಮಂತ್ರಿಯವರು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ

ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವ್ಯಾಪಕ ಪ್ರಚಾರ ದೊರಕಿಸಿಕೊಡಲು ಕೋರಲಾಗಿದೆ.

ಡಿ. ಪಿ. ಮುರಳೀಧರ್
ಉಪ ನಿರ್ದೇಶಕರು ( ವಾರ್ತೆ )

**ಪತ್ರಿಕಾ ಆಮಂತ್ರಣ**

1. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕದಳ, ಪೌರರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಗಳ ವೃತ್ತಿ ಸ್ಪರ್ಧೆ ಹಾಗೂ ಕ್ರೀಡಾಕೂಟ 2019-20ರ ಸಮಾರೋಪ ಸಮಾರಂಭ.

**ಮುಖ್ಯ ಅತಿಥಿ ಹಾಗೂ ಬಹುಮಾನ ವಿತರಣೆ:**

ಶ್ರೀ ಎಂ.ಎನ್. ರೆಡ್ಡಿ, ಐ.ಪಿ.ಎಸ್,
ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು,
ಗೃಹರಕ್ಷಕ ದಳ, ನಿರ್ದೇಶಕರು ಪೌರರಕ್ಷಣೆ,
ಮಹಾ ನಿರ್ದೇಶಕರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ
ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ, ಕರ್ನಾಟಕ.

ದಿನಾಂಕ: 12-12-2019 ಗುರುವಾರ, ಸಮಯ: ಸಂಜೆ 4.00 ಗಂಟೆಗೆ

ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029.

ಪತ್ರಿಕಾ ಪ್ರಕಟಣೆ

## ವಿಜಯ ದಿವಾಸ್ ಆಚರಣೆ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

1971 ರಲ್ಲಿ ನಡೆದ ಇಂಡೋ-ಪಾಕ್ ಯುದ್ಧದಲ್ಲಿ ಜಯವನ್ನು ತಂದು ಕೊಡಲು ದೇಶಕ್ಕಾಗಿ ಪ್ರಾಣತೆತ್ತ ವೀರ ಯೋಧರ/ಹುತಾತ್ಮರ ಸ್ಮರಣೀಯ ಸಂಕೇತವಾಗಿ ಪ್ರತಿ ವರ್ಷದಂತೆ, ಈ ವರ್ಷವೂ ಸಹ ವಿಜಯ ದಿವಸ್ ಆಚರಣೆಯನ್ನು 16-12-2016 ರ ಸೋಮವಾರದಂದು ಬೆಳಿಗ್ಗೆ 9.15 ಗಂಟೆಗೆ ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಸ್ಮಾರಕ ಶ್ರೀಮತಿ ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನದ ಹತ್ತಿರ, ಚೌಡಯ್ಯ ರಸ್ತೆ, ನೆಹರು ತಾರಾಲಯದ ಎದುರು, ರಾಜ ಭವನದ ಹತ್ತಿರ, ಬೆಂಗಳೂರು ಇಲ್ಲಿ ಆಚರಿಸಲಾಗುವುದು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಶ್ರೀ ಬಿ. ಎಸ್. ಯಡಿಯೂರಪ್ಪ ಹಾಗೂ ಗೌರವ ಅತಿಥಿಗಳಾಗಿ ಗೃಹ ಸಚಿವ ಶ್ರೀ ಬಸವರಾಜ ಬೊಮ್ಮಾಯಿ ಅವರು ಆಗಮಿಸುವರು.

ಈ ಸಮಾರಂಭದಲ್ಲಿ ಸೇವಾ ನಿರತ/ನಿವೃತ್ತ ಹಿರಿಯ ಸೇನಾಧಿಕಾರಿಗಳು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕ ಸೇವೆಯ ಅಧಿಕಾರಿಗಳು, ಎನ್.ಸಿ.ಸಿ. ಕೆಡೆಟ್ ಸಹ ಆಗಮಿಸುವರು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಪ್ರಕಟಣೆ ತಿಳಿಸಿದೆ.

# VIJAY DIWAS – 2019

Bengaluru, December 11 (Karnataka Information)

As in the past, to pay homage to the brave and valiant soldiers who laid down their lives during 1971 war, Vijay Diwas Function 2019 is organized on 16th December 2019 (Monday) at 9.15 AM at National Military Memorial, adjacent to Smt. Indira Gandhi Musical Fountain on Choudiah Road, opp. Nehru Planetarium, Near Raj Bhavan, Bengaluru. Hon'ble Chief Minister will be the Chief Guest and Hon'ble Home Minister will be guest of honour for the function. Other Ministers, Civil and Military Serving Officers, retired Defence Officers, a large number of Ex-servicemen and their families, NCC Cadets, school children and Serving Soldiers will be participating in the function.

The General public is also requested to visit the Memorial and Pay their respect for the sacrifice made by the Armed Forces personnel.

# ನೇಮಕ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

**ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿರುವ ಡಾ. ಇಂದಿರೇಶ್ ಕೆ.ಎಂ. ಅವರನ್ನು ವಿಶ್ವವಿದ್ಯಾಲಯದ ಪ್ರಭಾರ ಉಪಕುಲಪತಿಗಳಾಗಿ ನೇಮಿಸಲಾಗಿದೆ. ಇವರನ್ನು ದಿನಾಂಕ: 30–11–2019 ರಿಂದ ಒಂದು ತಿಂಗಳ ಅವಧಿ ಅಥವಾ ಖಾಯಂ ಉಪ ಕುಲಪತಿಗಳು ನೇಮಕಗೊಳ್ಳುವವರೆಗೆ ಉಪಕುಲಪತಿಗಳಾಗಿ ಮುಂದುವರಿಸಲಾಗಿದೆ ಎಂದು ರಾಜ್ಯಪಾಲರ ಸಚಿವಾಲಯದ ಪ್ರಕಟಣೆ ತಿಳಿಸಿದೆ.**

# ಸಾರಿಗೆ ಅದಾಲತ್

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

ಡಿಸೆಂಬರ್ 12 ರ ಗುರುವಾರ ಮಧ್ಯಾಹ್ನ 3.00 ಗಂಟೆಗೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ದಕ್ಷಿಣ), ಜಯನಗರ ಇಲ್ಲಿ ಸಾರಿಗೆ ಅದಾಲತ್‌ನ್ನು ಕಚೇರಿಯ 2ನೇ ಮಹಡಿಯ ಆಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ.

ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಮತ್ತು ಕುಂದು ಕೊರತೆಗಳ ಪರಿಹಾರಕ್ಕಾಗಿ ಈ ಅವಕಾಶವನ್ನು ಬಳಸಿಕೊಳ್ಳುವಂತೆ ಅಧಿಕೃತ ಪ್ರಕಟಣೆ ತಿಳಿಸಿದೆ.

# **SARIGE ADALAT**

Bengaluru, December 11 (Karnataka Information)

Sarige Adalat will be held on Thursday 12-12-2019 at 3.00 pm in the 2nd Floor, Auditorium by the Office of the Deputy Commissioner for Transport and Senior Regional Transport Officer, Bangalore (South) Jayanagar. Senior Officers of the Transport Department will be participating in the Adalat. Public are requested to avail this opportunjty for redressal of their grievances, if any in the Adalat says an official Press Release.

## ಪತ್ರಿಕಾ ಪ್ರಕಟಣೆ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

**ಸರ್ಕಾರದ ದಿನಾಂಕ: 31.10.2019 ರ ಸಂಖ್ಯೆ:ಕಾಇ 21 ಎಲ್ಎಂಡಬ್ಲ್ಯೂ 2017 (ಆ) ರ ಅಧಿಸೂಚನೆ ಪುಟ ಸಂಖ್ಯೆ : 2 ರ ಕಂಡಿಕೆ –4 ರಲ್ಲಿ "ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂದರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ" ಎಂಬ ಅಂಶವನ್ನು ಕೈಬಿಡಲಾಗಿದೆ.**

**ಉಳಿದಂತೆ, ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಕಾರ್ಮಿಕ ಇಲಾಖೆ ಪ್ರಕಟಣೆ ತಿಳಿಸಿದೆ.**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಆಯೋಗದ ಅಧಿಸೂಚನೆ ದಿನಾಂಕ: 15–04–2017 ರಲ್ಲಿ ಅಧಿಸೂಚಿಸಲಾಗಿರುವ ಈ ಕೆಳಕಂಡ ಹುದ್ದೆಗಳ ತಾತ್ಕಾಲಿಕ ಪಟ್ಟಿಯನ್ನು ದಿನಾಂಕ: 10–12–2019 ರಂದು ಆಯೋಗದ ವೆಬ್‌ಸೈಟ್ www/kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ ಸ್ಥಳೀಯ ಸಂಸ್ಥೆಗಳು) ಮುಖ್ಯಾಧಿಕಾರಿ ಶ್ರೇಣಿ – 2 – 34 ಹುದ್ದೆಗಳು. ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ ಸ್ಥಳೀಯ ಸಂಸ್ಥೆಗಳು) ಅಕೌಂಟೆಂಟ್ – 26 ಹುದ್ದೆಗಳು, ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ

ಸ್ಥಳೀಯ ಸಂಸ್ಥೆಗಳು) ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು – 37 ಹುದ್ದೆಗಳು. ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಲೆಕ್ಕ ಸಹಾಯಕರು – 149 (66 + 83 ಹೈ.ಕ.). ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಲ್ಲಿನ ವಿದ್ಯಾರ್ಥಿನಿಲಯ ಮೇಲ್ವಿಚಾರಕರು (ವಾರ್ಡನ್) – 117 (66+51 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ) ಯಲ್ಲಿನ ದೈಹಿಕ ಶಿಕ್ಷಕರು – 06 (04+02 ಹೈ.ಕ.) ಹುದ್ದೆಗಳು. ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ) ಯಲ್ಲಿನ ಕಚೇರಿ ಅಧೀಕ್ಷಕರು – 02 (01+01 ಹೈ.ಕ) ಹುದ್ದೆಗಳು. ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ) ಯಲ್ಲಿನ ಪ್ರಥಮ ದರ್ಜೆ ಗಣಕಯಂತ್ರ ಸಹಾಯಕ – 02 (01+01 ಹೈ.ಕ) ಹುದ್ದೆಗಳು. ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ) ಯಲ್ಲಿನ ಉಗ್ರಾಣ ನಿಯಂತ್ರಕರು/ವಾರ್ಡನ್ – 02 (01+01 ಹೈ.ಕ) ಹುದ್ದೆಗಳು, ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ) ಯಲ್ಲಿನ ಕ್ಯಾಟರಿಂಗ್ ಸೂಪರ್‌ವೈಸರ್/ನಿಲಯಪಾಲಕರು – 2 (01+01 ಹೈ.ಕ) ಹುದ್ದೆಗಳು.

ಸದರಿ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದು. ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## ರಾಜ್ಯದ 275 ಸ್ಥಳೀಯ ಸಂಸ್ಥೆಗಳ ಹಾಗೂ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ 7 ವಲಯ ಪಟ್ಟಣ ವ್ಯಾಪಾರ ಸಮಿತಿ ಸದ್ಯಸರ ಆಯ್ಕೆಗಾಗಿ ಚುನಾವಣೆ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)–

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ನಾಟಕ ಬೀದಿ ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರ ನಿಯಂತ್ರಣ) ನಿಯಮಗಳು

2019 ರನ್ವಯ  ಪಟ್ಟಣ ವ್ಯಾಪಾರ ಸಮಿತಿಗೆ ಚುನಾವಣೆ ನಡೆಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಹಾಗೂ ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ಅವರುಗಳಿಂದ ಸ್ವೀಕೃತವಾಗಿರುವ ವರದಿಯನ್ವಯ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರ ನಿಯಂತ್ರಣ) ನಿಯಮಗಳು 2019 ರ ನಿಯಮ 5(2) 6(2) ಹಾಗೂ ಅನುಸೂಚಿ (4) ರಲ್ಲಿನ ದತ್ತವಾದ ಅಧಿಕಾರವನ್ನು ಚಲಾಯಿಸಿ  ರಾಜ್ಯದ 275 ಸ್ಥಳೀಯ ಸಂಸ್ಥೆಗಳ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 7 ವಲಯಗಳ ಪಟ್ಟಣ ವ್ಯಾಪಾರ ಸಮಿತಿಗೆ ಸದಸ್ಯರನ್ನು (ಪ್ರತಿನಿಧಿಗಳ) ಆಯ್ಕೆ ಮಾಡುವ ಸಲುವಾಗಿ ಅವುಗಳ ಮುಂದೆ ತಿಳಿಸಿರುವ ಸ್ಥಳಗಳಲ್ಲಿ ದಿನಾಂಕ: 21-12-2019 ರಂದು (ಸಮಯ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ) ಚುನಾವಣೆಯನ್ನು ನಡೆಸಲು ಆದೇಶಿಸಿದೆ.

ನಾಮಪತ್ರಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿ – 09-12-2019 ರಿಂದ 13-12-2019 ರವರೆಗೆ ಸಮಯ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ.

ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ: 14-12-2019ರ ಬೆಳಿಗ್ಗೆ 11.00 ಗಂಟೆಯಿಂದ.  ಸಿಂಧುವಾದ ನಾಮಪತ್ರಗಳನ್ನು ಪ್ರಟಿಸಬೇಕಾದ ದಿನಾಂಕ: 14-12-2019 ರಂದು ಮಧ್ಯಾಹ್ನ 3-00 ಗಂಟೆಗೆ.-

ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ: 15-12-2019 ಸಂಜೆ 5.00 ಗಂಟೆಗಿಂತ ಮುಂಚೆ.  ಅಂತಿಮವಾಗಿ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ 15-12-2019 ರಂದು ಸಂಜೆ 5.30 ಗಂಟೆಗೆ.

ಅಗತ್ಯಬಿದ್ದಲ್ಲಿ ಮತದಾನ ನಡೆಯುವ ದಿನಾಂಕ, ಸ್ಥಳ ಮತ್ತು ಮತದಾನದ ಸಮಯ 21-12-2019 ಸಮಯ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ.  ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಿ, ಚುನಾವಣೆ ಫಲಿತಾಂಶ ಪ್ರಕಟಣೆ ದಿನಾಂಕ: 21.12.2019.